

ಅಖಿಲ ಭಾರತ ಗಂಧರ್ವ ಮಹಾವಿದ್ಯಾಲಯದ ಬೆಂಗಳೂರು ಶಾಖೆಯ ಸಮಸ್ತ ಹೊಣೆ ಹೊತ್ತು ಸಂಗೀತ ವಿದ್ಯಾರ್ಥಿಗಳಿಗೆ ಪರೀಕ್ಷೆಯ ಹಾದಿ ಸುಗಮಗೊಳಿಸಿದ ಗಾಯಕ, ಬೋಧಕ, ಸಂಪನ್ಮೂಲ ವ್ಯಕ್ತಿ ಪಂ.ವಿ.ಎಂ. ನಾಗರಾಜ್. ಸಂಗೀತ ಕೃತಿ ಮಾತ್ರವಲ್ಲದೆ ಲಯಕ್ಕಾಗಿ ಬಳಸುವ ವಿಶಿಷ್ಟ ತಾಳಗಳನ್ನೂ ರಚನೆ ಮಾಡಿದ ಅಪರೂಪದ ಸಾಧಕರಿವರು.

# ಸಂಗೀತ ಬೋಧನೆ ಜೊತೆ ಜೊತೆಗೆ ತಾಳಗಳ ರಚನೆ

■ ಉಮಾ ಅನಂತ್

ಸಂಗೀತವನ್ನು ಶಿಸ್ತುಬದ್ಧ ಹಾಗೂ ಶಾಸ್ತ್ರಬದ್ಧವಾಗಿ ಕಲಿಯುವವರಿಗೆ ಸಂಗೀತಕ್ಕೆ ಸಂಬಂಧಿಸಿದ ವಿವಿಧ ಪರೀಕ್ಷೆಗಳು ಕಲಿಕೆಯ, ಬುದ್ಧಿಮತ್ತೆಯನ್ನು ಅಳೆಯುವ ಮಾನದಂಡಗಳು. ಇದಕ್ಕಾಗಿ ಕರ್ನಾಟಕ ಪ್ರೌಢಶಿಕ್ಷಣ ಮಂಡಳಿ, ಅಖಿಲ ಭಾರತ ಗಂಧರ್ವ ಮಹಾವಿದ್ಯಾಲಯ ಮುಂತಾದ ಕೇಂದ್ರಗಳು ಮಕ್ಕಳಿಗೆ ವಿವಿಧ ಹಂತದ ಶಾಸ್ತ್ರೀಯ ಸಂಗೀತ, ತಾಳವಾದ್ಯ, ಭರತನಾಟ್ಯ ಹಾಗೂ ಇನ್ನಿತರೆ ಪರೀಕ್ಷೆಗಳನ್ನು ನಡೆಸುತ್ತವೆ.

ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ಪಠ್ಯಕ್ರಮವನ್ನು ರೂಪಿಸುವಲ್ಲಿ ಮಹತ್ತರ ಪಾತ್ರ ವಹಿಸಿದವರು ಪಂ. ವಿಷ್ಣು ದಿಗಂಬರ ಭಾತಖಾಂಡೆ ಹಾಗೂ ಪಂ. ವಿಷ್ಣು ನಾರಾಯಣ ಭಾತಖಾಂಡೆ ಅವರು. 'ಅಖಿಲ ಭಾರತ ಗಂಧರ್ವ ವಿದ್ಯಾಲಯ'ವನ್ನು ಮುಂಬಯಿಯಲ್ಲಿ 1901ರಲ್ಲಿ ಸ್ಥಾಪಿಸಿ ಸಂಗೀತ ಕಲಿಕೆಯ ಮಕ್ಕಳಿಗೆ ಪರೀಕ್ಷೆ ನಡೆಸುವುದು, ಪಠ್ಯಬೋಧನೆ ಕ್ರಮದ ಬಗ್ಗೆ ತಿಳಿಸುವ ಕೆಲಸ ಆರಂಭಿಸಿದ್ದು ಕೂಡ ಇದೇ ಇಬ್ಬರು ಮಹಾ ಸಂಗೀತಜ್ಞರು. ಪ್ರತಿ ವರ್ಷವೂ ವರ್ಷಕ್ಕೆರಡು ಬಾರಿ ಸಂಗೀತದ ವಿವಿಧ ಹಂತಗಳ ಪರೀಕ್ಷೆಗಳನ್ನು ಗಂಧರ್ವ ಮಹಾವಿದ್ಯಾಲಯ ನಡೆಸಿಕೊಂಡು ಬರುತ್ತಿದೆ. ಇದರಲ್ಲಿ ಹಾಡುಗಾರಿಕೆ, ವಾದ್ಯ ಸಂಗೀತ ಹಾಗೂ ನೃತ್ಯಪ್ರಕಾರಗಳಿರುತ್ತವೆ. ಈ ಪರೀಕ್ಷೆಗಳು ಭಾರತ ಅಲ್ಲದೆ ವಿದೇಶಗಳಲ್ಲೂ ಒಟ್ಟು 800 ಕೇಂದ್ರಗಳಲ್ಲಿ ಏಕಕಾಲಕ್ಕೆ ನಡೆಯುತ್ತವೆ.

ಬೆಂಗಳೂರಿನಲ್ಲಿ ಅಖಿಲ ಭಾರತ ಗಂಧರ್ವ ಮಹಾವಿದ್ಯಾಲಯದ ಸಮಸ್ತ ಹೊಣೆ ಹೊತ್ತು ಸಾವಿರಾರು ಮಕ್ಕಳಿಗೆ ಸಂಗೀತ ಪರೀಕ್ಷೆಯಲ್ಲಿ ತೊಡಗಿಸಿಕೊಳ್ಳುವಂತೆ ಮಾಡಿದವರು ಸ್ವತಃ ಹಿಂದೂಸ್ತಾನಿ ಗಾಯಕರೂ ಆಗಿರುವ ಪಂ. ವಿ.ಎಂ. ನಾಗರಾಜ್ ಅವರು.

ಗ್ವಾಲಿಯರ್ ಘರಾಣೆ ಶೈಲಿಯಲ್ಲಿ ಹಾಡುವ